ಲೋಚನೆ ನಡೆಸುವ ನೆಪ ಹೇಳಿ ಕಡೆಗೆ ಏಕಪಕ್ಷೀಯವಾಗಿ ತೀರ್ಮಾನ ಮಾಡಿ ಯಾವುದೇ ನ್ಯಾಯ ಸಮ್ಮತ ಸೂತ್ರವನ್ನು ಅನುಸರಿಸದೆ ಸ್ವೇಚ್ಛಾಚಾರದಿಂದ ಹಾಗೂ ಕಾನೂನು ಬಾಹಿರವಾಗಿ ಆಳುವ ಜನತಾ ಪಕ್ಷದ ರಾಜಕೀಯ ಸಾಧನೆಯನ್ನೇ ಗುರಿಯಾಗಿಟ್ಟುಕೊಂಡು ದುರ್ಬಲ ಹಾಗೂ ಅಲ್ಪಸಂಖ್ಯಾತ ವರ್ಗಗಳ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿ ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬೇರೂರುವಂತೆ ರಾಜಕೀಯ ಪಿತೂರಿ ನಡೆಸಿರುವ ಬಗ್ಗೆ ಈ ಸೂಚನೆ ನೀಡಲಾಗಿದೆ.''

ಈಗ ಅಡ್ಮಿಸಿಬಿಲಿಟಿ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೆ,.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇದರ ಬಗ್ಗೆ ನನ್ನದೊಂದು ಸಲಹೆ ಇದೆ. ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯತ್ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಅಷ್ಟು ಸೂಕ್ತ ಅಲ್ಲ. ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು ಅದನ್ನು ಒಪ್ಪುತ್ತೇನೆ. ಇದನ್ನು ಎರಡೂವರೆ ಗಂಟೆಯ ಕಾಲದ ಚರ್ಚೆಯಲ್ಲಿ ತೆಗೆದುಕೊಂಡರೆ ವಿವರ ಹೇಳಬಹುದು ಆದೇ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಆಗುವುದಿಲ್ಲ.

ಅಧ್ಯಕ್ಷರು.—ಹಾಗಾದರೆ ನಾಳೆ ತೆಗೆದುಕೊಳ್ಳೋಣವೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ, ಎಲ್ಲಾ ಜಿಲ್ಲಾಧಿಕಾರಿಗಳು ಸಭೆ ಮಾಡಿದ್ದಾರೆ, ಅವರಿಂದ ವಿವರ ತರಿಸಬೇಕಾಗುತ್ತದೆ. ಆದ್ದರಿಂದ ಇದನ್ನು ಸೋಮವಾರ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿಗಳ ಸಭೆ ನಡೆಸಿರುತ್ತಾರೆ, ಪ್ರೊಸೀಡಿಂಗ್ಸ್ ಆಗಿರುತ್ತದೆ ಅದನ್ನು ತರಿಸಬೇಕೆಂದು ಹೇಳಿದರು ಅದಕ್ಕೆ ಪೂರ್ವ ಭಾವಿಯಾಗಿ ಚರ್ಚೆಮಾಡಬಹುದು.

ಅಧ್ಯಕ್ಷರು.—ರೂಲ್ ೬೮ರ ಪ್ರಕಾರ ಅವರು ಒಪ್ಪಿಕೊಂಡಿದ್ದಾರೆ, ಸೋಮವಾರ ೩ ಗಂಟೆಗೆ ಇದನ್ನು ಇಡೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಇದರ ಬಗ್ಗೆ ಚರ್ಚೆಗೆ ಬೇರೆ ನಿಯಮಾವಳಿಯಲ್ಲೇ ತೆಗೆದುಕೊಳ್ಳೋಣ. ನಾವು ಅರ್ಜೆಂಟ್ ಆಗಿ ಇದನ್ನು ತೆಗೆದುಕೊಳ್ಳಬೇಕೆಂದು ಏತಕ್ಕೆ ಹೇಳುತ್ತಿದ್ದೇವೆ ಎಂದರೆ, ಈಗಾಗಲೇ ಸರ್ಕಾರದಿಂದ ಅನೇಕ ಸುತ್ತೋಲೆಗಳನ್ನು ಕಳುಹಿಸಿದ್ದಾರೆ. ಆದ್ದರಿಂದ, ನಾಳೆ ಅಥವಾ ನಾಡಿದ್ದು ಇದನ್ನು ಏತಕ್ಕೆ ತೆಗೆದುಕೊಳ್ಳಬಾರದು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ, ಜಿಲ್ಲಾಧಿಕಾರಿಗಳಿಂದ ವಿವರವನ್ನು ತರಿಸಬೇಕಾಗುತ್ತದೆ. ಆದ್ದರಿಂದ ಸೋಮವಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಶುಕ್ರವಾರ ಬೂರಿಗೆ ಹೊಗತಕ್ಕ ಸದಸ್ಯರು ಹೋಗುತ್ತಾರೆ. ಆದ್ದರಿಂದ ಸೋಮವಾರ ಇಡೋಣ.

ಗಮನ ಸೆಳೆಯುವ ಸೂಚನೆ

ವಿದ್ಯುಚ್ಛಕ್ತಿ ಅಭಾವದಿಂದ ಅಲೆಂಬಿಕ್ ಗಾಜಿನ ಕಾರ್ಖಾನೆಯನ್ನು ಮುಚ್ಚಿರುವುದು

ಶ್ರೀ ಎಂ ಎಸ್. ಕೃಷ್ಣನ್.—ಅಲೆಂಬಿಕ್ ಗಾಜಿನ ಕಾರ್ಖಾನೆಯನ್ನು ಮುಚ್ಚಿರುವ ಬಗ್ಗೆ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ರೆವಿನ್ಯೂ ಹಾಗೂ ಕಾರ್ಮಿಕ ಮಂತ್ರಿಗಳು).—ತೀವ್ರ ವಿದ್ಯುಚ್ಛಕ್ತಿ ಅಭಾವದ ಪ್ರಯುಕ್ತ ದಿನಾಂಕ ೧೫-೧೧-೧೯೮೪ರಿಂದ ಅಲೆಂಬಿಕ್ ಗ್ಲಾಸ್‌ವರ್ಕಾ ಕಾರ್ಖಾನೆಯು

ಮೂಲೀಕರು ಕಾರ್ಮಿಕರನ್ನು ಲೇ-ಆಫ್ ಮಾಡಿರುತ್ತಾರೆ. ಒಟ್ಟು ೮೦೦ ಮಂದಿ ಕಾರ್ಮಿಕರು ಈ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದಾರೆ. ಅಲೆಂಬಿಕ್ ಗ್ಲಾಸ್ ಕಾರ್ಖಾನೆಯು ತನ್ನ ನೌಕರರಿಗೆ ಲೇ-ಆಫ್ ಪ್ರಯುಕ್ತ ೩೦-೬-೧೯೮೫ರವರೆಗೆ ಪರಿಹಾರ ಸಂಬಳವನ್ನು ಕೊಡಲಾಗಿದೆ.

ಅಲೆಂಬಿಕ್ ಗಾಜಿನ ಕಾರ್ಖಾನೆಯು ತಮ್ಮ ಅರ್ಜಿ ದಿನಾಂಕ ೨೩-೨-೧೯೮೫ ರಲ್ಲಿ ತೀವ್ರ ವಿದ್ಯುಚ್ಛಕ್ತಿ ಅಭಾವದಿಂದ ಹಾಗೂ ಹಣಕಾಸಿನ ತೊಂದರೆಯಿಂದಾಗಿ ಕಾರ್ಖಾನೆಯನ್ನು ಮುಚ್ಚಲು ಸರ್ಕಾರಕ್ಕೆ ಮನವಿ ಮಾಡಿದೆ. ಸರ್ಕಾರ ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಮಾತುಕತೆ ಮಾಡಿದ ನಂತರ ಕಾರ್ಖಾನೆಯನ್ನು ಮುಚ್ಚಲು ಅನುಮತಿಯನ್ನು ನಿರಾಕರಿಸಿ ಇಲಾಖೆಯು ಎಸ್.ಡಬ್ಲ್ಯೂ.ಎಲ್. ೧೪೬ ಎಲ್.ಎಲ್.ಡಿ ೮೫ ದಿನಾಂಕ ೨೨-೪-೧೯೮೫ ರಂದು ಆದೇಶವನ್ನು ಹೊರಡಿಸಲಾಗಿದೆ.

ದಿನಾಂಕ ೨೩-೪-೧೯೮೫ ರಂದು ಅಲೆಂಬಿಕ್ ಗ್ಲಾಸ್ ಕಾರ್ಖಾನೆಯ ಆಡಳಿತ ವರ್ಗವು ಕೈಗಾರಿಕೆ ವಿವಾದಗಳ ಅಧಿನಿಯಮ೫ರ ಉಪನಿಯಮ ೨೫(೦) ರಲ್ಲಿ ಒಂದು ಅರ್ಜಿಯನ್ನು ಒಪ್ಪಿಸಲಾಗಿದೆ. ಇದರಲ್ಲಿ ಆಡಳಿತವರ್ಗವು ಸರ್ಕಾರ ಹೊರಡಿಸಿದ ಆದೇಶವನ್ನು ಪುನಃ ಪರಿಶೀಲಿಸಿ ಅಥವಾ ಈ ವಿವಾದವನ್ನು ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸುವಂತೆ ಕೇಳಲಾಗಿದೆ.

ಈ ಮಧ್ಯೆ ಆಡಳಿತ ವರ್ಗವು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ನಂ. ೮೫೯೭-೮೫ ಎನ್ನುವ ರಿಟ್ ಮೊಕದ್ದಮೆಯನ್ನು ದಿನಾಂಕ ೧೯-೬-೮೫ ರಂದು ಹೂಡಿ ಸರ್ಕಾರಕ್ಕೆ ಒಂದು ಆದೇಶವನ್ನು ಹೊರಡಿಸಿ ವಿವಾದವನ್ನು ಎರಡು ವಾರಗಳಲ್ಲಿ ತಾತ್ಕಾಲಿಕವಾಗಿ ಪುನರ್ ಪರಿಶೀಲಿಸುವಂತೆ ಆದೇಶ ಬಂದಿದೆ. ಇದರಂತೆ ದಿನಾಂಕ ೨-೭-೧೯೮೫ ರಂದು ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಮಾತುಕತೆ ನಡೆಸಿದ ನಂತರ ಸರ್ಕಾರ ಆಡಳಿತ ವರ್ಗದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಶೀಲಿಸಿ ತಳ್ಳಿ ಹಾಕಿತು.

ಮೇಲೆ ಹೇಳಿದ ಕಾರಣದಿಂದ ಅಲೆಂಬಿಕ್ ಗ್ಲಾಸ್ ಕಾರ್ಖಾನೆಯು ಆಡಳಿತ ವರ್ಗವು ದಿನಾಂಕ ೧೦-೧-೧೯೮೫ ರಲ್ಲಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಸರ್ಕಾರವನ್ನು ತಾನು ಹೊರಡಿಸಿದ ಆದೇಶವನ್ನು ಪುನರ್ ಪರಿಶೀಲಿಸುವಂತೆ ಆದೇಶ ನೀಡಲು ಮನವಿ ಮಾಡಿದ್ದಾರೆ. ಈ ವಿಚಾರದಲ್ಲಿ ನ್ಯಾಯಾಲಯ ರಿಟ್ ಅಪೀಲ್ ಸಂಖ್ಯೆ ೨೧೪೯-೪೫ ನ್ನು ಗಣನೆಗೆ ತೆಗೆದುಕೊಂಡು ಅದರಲ್ಲಿ ಏಕ ಸದಸ್ಯ ನ್ಯಾಯಾಧೀಶರು, ಕೈಗಾರಿಕೆಗಳ ಅಧಿನಿಯಮ ೨೫-೦, ಅನುಚ್ಛೇದ ೧೯(ಜಿ) ಸಂವಿಧಾನದಂತೆ ನಿಯಮೊಲ್ಲಂಘನೆ ಎಂದು ಸ್ಪಷ್ಟವಾಗಿ ಮತ್ತು ಸೋಮಪ್ಪ ನಿಯಮಿತ ಇವರ ವಿವಾದದಲ್ಲಿ ತಡೆ ಹಿಡಿದು ಸಿಂಗಲ್ ಜಡ್ಜ್ ತೀರ್ಮಾನದಂತೆ ಕಾರ್ಮಿಕರಿಗೆ ಪರಿಹಾರವನ್ನು ಅಧಿನಿಯಮ ೨೫-ಎಂ ರ ಪ್ರಕಾರ ಕೊಡಬೇಕೆಂದು ಹೇಳಿದ್ದಾರೆ.

ಮೇಲಿನ ರಿಟ್ ಅರ್ಜಿಯಲ್ಲಿ ಡಿವಿಜನ್ ಬೆಂಚ್ ತೆಗೆದುಕೊಂಡ ತೀರ್ಮಾನದಂತೆ ಅರ್ಜಿದಾರರು ಲೇ-ಆಫ್ ಪರಿಹಾರವನ್ನು ಯಾವ ದಿನಾಂಕದಿಂದ ಕಾರ್ಮಿಕರಿಗೆ ನಿರಾಕರಿಸಿದ್ದಾರೋ ಆ ದಿನಾಂಕದಿಂದ ಜನವರಿ ೧೯೮೬ ಕೊನೆಯವರೆಗೆ ಕೊಡಲು ತೀರ್ಪಿತ್ತಿದ್ದಾರೆ.

ದಿನಾಂಕ ೨೩-೮-೧೯೮೫ ರಂದು ಅಲೆಂಬಿಕ್ ಗ್ಲಾಸ್ ಕಾರ್ಖಾನೆಯು ಒಂದು ಅರ್ಜಿಯನ್ನು ಸಲ್ಲಿಸಿ ಕಾರ್ಖಾನೆಯು ತನ್ನ ನೌಕರರಿಗೆ ಡಿಸೆಂಬರ್ ೮೪ಳಿಕ್ಕೆ ಕೊಡಬೇಕಾದ ರೂ. ೬ ಲಕ್ಷ ಬೋನಸ್ಸನ್ನು ಕೊಡಲು ಹಣಕಾಸಿನ ತೊಂದರೆಯಿರುವುದರಿಂದ ಸಾಧ್ಯವಿಲ್ಲವೆಂದು ಹೇಳಿ ಒಂದು ವರ್ಷ ಆರು ತಿಂಗಳ ಕಾಲಾವಕಾಶವನ್ನು ಬೇಡಿದೆ.

ಬೋನಸ್ ಆಕ್ಟ್ ನಿಯಮ ೧೯ರ ಪ್ರಕಾರ ಬೋನಸ್‌ನ್ನು ತನ್ನ ನೌಕರರಿಗೆ ಕೊಡಲು ಆಡಳಿತ ವರ್ಗ ಮಾಡಿರುವ ಕಾಲಾವಕಾಶದ ಅರ್ಜಿಯನ್ನು ನಿರಾಕರಿಸಲಾಗಿದೆ.

ಅತೃಪ್ತಿಗೊಂಡ ಆಡಳಿತ ವರ್ಗವು ಸರ್ಕಾರವು ಬೋನಸ್ ಕೊಡುವಂತೆ ಮಾಡಿದ ಆದೇಶವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲು ಮಾಡಿ ಆಡಳಿತ ವರ್ಗವು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ಎಂ. ಎಸ್. ದರ್ಶಕ್ ಎಂಬ ಸಂಸ್ಥೆಗೆ ಕಾರ್ಖಾನೆಯನ್ನು ವರ್ಗಾಯಿಸಿರುವ ಬಗ್ಗೆ ಅಲೆಂಬಿಕ್ ಗ್ಲಾಸ್ ಕಾರ್ಖಾನೆಯ ಕಾರ್ಮಿಕರು ಎತ್ತಿದ ಕೈಗಾರಿಕಾ ವಿವಾದವನ್ನು ನ್ಯಾಯನಿರ್ಣಯಕ್ಕೆ ಬೆಂಗಳೂರಿನ ಅಪರ ಔದ್ಯಮಿಕ ನ್ಯಾಯಾಧಿಕರಣಕ್ಕೆ ದಿನಾಂಕ ೪-೮-೧೯೮೬ ರಂದು ಒಪ್ಪಿಸಲಾಗಿದೆ.

ಕೈಗಾರಿಕಾ ಕಾಯ್ದೆ ೧೯೪೭ ರ ಸೆಕ್ಷನ್ ೨೫–ಎಂ ಅನ್ನು ಉಲ್ಲಂಘನೆ ಮಾಡಿರುವುದಕ್ಕೆ ಕಾರ್ಖಾನೆಯ ಮಾಲೀಕರ ವಿರುದ್ಧ ದಾವಾ ಹೂಡಲು ಕಾರ್ಮಿಕ ಆಯುಕ್ತರು, ಬೆಂಗಳೂರು, ಇವರಿಗೆ ಸರ್ಕಾರ ಅನುಮತಿಯನ್ನು ನೀಡಿದೆ. ತಮಗೆ ಬರಬೇಕಾದ ಹಣದ ಬಾಕಿಗಾಗಿ (ಲೇ–ಆಫ್ ಪರಿಹಾರ) ಸಂಬಂಧಪಟ್ಟ ಕಾರ್ಮಿಕ ನ್ಯಾಯಾಲಯದಲ್ಲಿ ಐಡಿ ಆಕ್ಟ್‌ನ ಸೆಕ್ಷನ್ ೩೩ (೩) (೨)ರ ಪ್ರಕಾರ ಒಂದು ಅರ್ಜಿಯನ್ನು ಸಲ್ಲಿಸಬೇಕೆಂದು ಕಾರ್ಮಿಕ ಸಂಘದವರಿಗೆ ಒಂದು ಹಿಂಬರಹವನ್ನು ಜಾರಿ ಮಾಡಲಾಗಿದೆ.

ಕಾನೂನಿನ ಅಡಿಯಲ್ಲಿ ಈ ವಿಷಯದ ಬಗ್ಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ದುರ್ದೈವದಿಂದ ಈ ವಿವಾದ ಕಳೆದ ಸುಮಾರು ೨ ವರ್ಷಗಳಿಂದ ನಿಂತಿದೆ. ಮತ್ತು ಆ ಕಾರ್ಖಾನೆ ಮುಚ್ಚಿದೆ. ಕಾರ್ಮಿಕರಿಗೆ ಇವೊತ್ತು ಅತೀವ ತೊಂದರೆಯಾಗಿದೆ. ಈ ಬಗ್ಗೆ ಅನೇಕ ರೀತಿಯ ಚರ್ಚೆಯಾಗಿದೆ ? ಸಮಾಲೋಚನೆಯಾಗಿದೆ. ಆದರೂ ಕೂಡ ಇವತ್ತಿನವರಿಗೂ ಇದು ಇತ್ಯರ್ಥವಾಗಲಿಲ್ಲ. ನಿನ್ನೆಯ ದಿವಸ ನಾನು ಮುಖ್ಯಮಂತ್ರಿಗಳು, ಕೈಗಾರಿಕಾ ಸಚಿವರು ಹಾಗೂ ನಾನೂ ಸೇರಿ ಒಂದು ಸಭೆಯನ್ನು ನಡೆಸಿದ್ದೇವೆ. ಆದರಲ್ಲಿ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಮತ್ತು ಕಾರ್ಮಿಕರ ನಾಯಕರು ಹಾಗೂ ಆ ಕ್ಷೇತ್ರದ ಶಾಸಕರಾದ ಶ್ರೀಮಾನ್ ಬಚ್ಚೇಗೌಡರು ಪಾಲ್ಗೊಂಡಿದ್ದರು. ಅಲ್ಲಿ ಬಂದಂತಹ ಕೆಲವು ಸಲಹೆಗಳನ್ನು ಸರ್ಕಾರ ಈ ಪರಿಶೀಲನೆ ಮಾಡುತ್ತಿದೆ. ಒಂದನೆಯದಾಗಿ ಬೇರೆ ಖಾಸಗಿಯವರು ಈ ಕಾರ್ಖಾನೆಯನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆಂಬ ಸೂಚನೆ ಬಂದಿದೆ. ಅವರ ಜೊತೆಗೂ ಮಾತುಕತೆ ಮಾಡತಕ್ಕಂತಹ ಆಲೋಚನೆ ಮಾಡುತ್ತಿದ್ದೇವೆ. ಇನ್ನೊಂದು ವಿಚಾರವನ್ನೂ ಕೂಡ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡುತ್ತಿದೆ. ಖಾಸಗಿಯವರು ಈ ರೀತಿ ಕಾರ್ಖಾನೆಯನ್ನು ತಮಗೆ ಯಾವಾಗ ಅನುಕೂಲವಾಗುತ್ತದೆಯೋ ನಡೆಸುವುದು, ತಮಗೆ ಯಾವಾಗ ಅನಾನುಕೂಲವಾಗುತ್ತದೋ ಆಗ ನಿಲ್ಲಿಸತಕ್ಕಂತಹ ಅಥವಾ ಅದನ್ನು ಮುಚ್ಚತಕ್ಕಂತಹ ಒಂದು ಪ್ರವೃತ್ತಿ ಬೆಳೆಯುತ್ತಿದೆ. ಕೆಲವು ಸಲ ಈ ರಾಜ್ಯದಿಂದ ಆ ಕಾರ್ಖಾನೆಗಳನ್ನು ತಮಗೆ ಅನುಕೂಲವಾದ ಬೇರೆ ರಾಜ್ಯಗಳಲ್ಲಿ ಸ್ಥಳಾಂತರ ಮಾಡತಕ್ಕಂತಹ ಪ್ರಯತ್ನ ಕೂಡ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಒಂದು ಕಾನೂನನ್ನೇ ತರಬೇಕು ಎನ್ನುವ ಆಲೋಚನೆಯಲ್ಲಿದೆ. ಎಲ್ಲೆಲ್ಲಿ ಖಾಸಗಿಯವರು ಈ ರೀತಿ ಕಾರ್ಖಾನೆಗಳನ್ನು ಮುಚ್ಚಿದ್ದಾರೋ ಅವುಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ನಂತರ ಅವುಗಳನ್ನು ಸರ್ಕಾರವೇ ನಡೆಸತಕ್ಕಂಥದ್ದಾಗಲಿ, ಅಥವಾ ಬೇರೆ ಖಾಸಗಿಯವರಿಗೆ ಕೊಡತಕ್ಕಂತಹದ್ದಾಗಲಿ, ಇಲ್ಲವೇ ಯಾವುದಾದರೂ ಕಾರ್ಮಿಕ ಸಂಘಗಳಿಗೆ ಇದನ್ನು ವಹಿಸಿ ಕೊಡತಕ್ಕಂತಹ ಒಂದು ವ್ಯವಸ್ಥೆ ಮಾಡುವ ಆಲೋಚನೆ ಸರ್ಕಾರದ ಗಮನದಲ್ಲಿದೆ. ಆದಷ್ಟು ಬೇಗ ಸಂಬಂಧಪಟ್ಟಂಥಹ ಕಾರ್ಖಾನೆಯ ಬಗ್ಗೆ ಏನೊಂದು ವಿವಾದ ಇಲ್ಲದೆ ಅದನ್ನು ಇತ್ಯರ್ಥ ಪಡಿಸುವಂಥಹ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಹೇಳಿದ ಹಾಗೆ ಸುಮಾರು ೨ ವರ್ಷಗಳಿಂದ ಈ ಕಾರ್ಖಾನೆ ನಿಂತಿದೆ. ಸುಮಾರು ೧,೦೦೦ ಜನ ಕಾರ್ಮಿಕರು ಕೆಲಸ ಇಲ್ಲದೆ ತೀವ್ರವಾಗಿ ನರಳುತ್ತಿದ್ದಾರೆ. ಅಲೆಂಬಿಕ್ ಗ್ಲಾಸ್ ಕಾರ್ಖಾನೆ ಮುಚ್ಚುವುದಕ್ಕೆ ಕಾರಣ ಅದು ನಷ್ಟವಾಗುತ್ತಿದೆ ಆದರಿಂದ ಇವತ್ತಿನ ದಿವಸ ಅದನ್ನು ಮುಚ್ಚಬೇಕಾಗಿದೆ ಎಂಬ ಪ್ರಶ್ನೆಯಲ್ಲ. ಈ ದೇಶದಲ್ಲಿ ಗ್ಲಾಸ್ ಕೈಗಾರಿಕೆ ಬಹಳ ಚೆನ್ನಾಗಿ ನಡೆಯುತ್ತಿದೆ ಅಂತ ಹೇಳಿ ಬಿಟ್ಟು ಗ್ಲಾಸ್ ಕೈಗಾರಿಕೆ ಮಾಲೀಕರುಗಳೆಲ್ಲರೂ ದೆಹಲಿಯಲ್ಲಿ ಸೇರಿದಂತಹ ಸಂದರ್ಭದಲ್ಲಿ ಪಾಲ್ಗೊಂಡು ಇದು ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ತೀರ್ಮಾನ ಮಾಡಿದ್ದಾರೆ. ಲಾಭ ಬರುತ್ತಿರುವ ಒಂದು ಕೈಗಾರಿಕೆಯನ್ನು ನಡೆಸದೆ ಇವೊತ್ತು ಮುಚ್ಚಿದ್ದಾರೆ. ಅದಕ್ಕೆ ಪಾರುಕಟ್ಟೆ ಇಲ್ಲದೆ ಮುಚ್ಚುವಂತಹ ಪರಿಸ್ಥಿತಿ ಬಂದಿಲ್ಲ. ಆದರಲ್ಲೂ ಸುಮಾರು ೨ ವರ್ಷಗಳ ಕಾಲ ಅದನ್ನು ಹಾಗೆ ಬಿಟ್ಟಿರುವುದಕ್ಕೆ ಕಾರಣ ಏನು ಎನ್ನುವುದು ಇನ್ನೊಂದು ಪ್ರಶ್ನೆ. ಸರ್ಕಾರ ಇದರ ಬಗ್ಗೆ ಏನೂ ಮಾಡಿಲ್ಲ. ಎಂದು ಹೇಳುವುದಿಲ್ಲ. ಸ್ವಲ್ಪ ಸ್ವಲ್ಪ ಮಾಡುತ್ತಿದ್ದಾರೆಯೇ ವಿನಹ ಮೇಲಿಂದ ಮೇಲೆ ಪದೇ ಪದೇ ಕಾರ್ಮಿಕರು ಬರಬೇಕೇ ? ಧರಣಿ ಮಾಡಬೇಕೇ ? ಎಲ್ಲಿಯತನಕ ಕಾರ್ಮಿಕರು ಹೋದರು ಎಂದರೆ ಅಲ್ಲಿ ೫೨ ಎಕರೆ ಜಮೀನು ಇತ್ತು ಅದರಲ್ಲಿ ಕಾಸೋರಿನಾ ಮರಗಳನ್ನು ಬೆಳೆಸಿದ್ದಾರೆ. ಎರಡು ವರ್ಷದಿಂದ ಊಟ ಇಲ್ಲದೆ ನರಳುತ್ತಿರುವ ಆ ಕಾರ್ಮಿಕರು, ಅದನ್ನು ಕಡಿದು ಮಾರಿಯಾದರೂ ಜೀವನ ಮಾಡಬೇಕೆಂದು ತೀರ್ಮಾನ ಮಾಡಿ, ಮರವನ್ನು ಕಡಿದು ಮಾರಾಟ ಮಾಡುವುದಕ್ಕೆ ಬಂದ ತಕ್ಷಣ ಪೋಲೀಸ್‌ನವರು ಆ ೬೦೦ ಜನರನ್ನೂ ಅರೆಸ್ಟ್ ಮಾಡಿಕೊಂಡು ಕರೆದುಕೊಂಡು ಹೋದರು. ಅದರ ಫಂಡಮೆಂಟಲ್ ರೈಟ್ಸ್ ಮಾಲೀಕರಿಗಿದೆ. ಆಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ಅವರ ಫಂಡಮೆಂಟಲ್ ರೈಟ್ಸ್ ಇಲ್ಲ. ನಂತರ ಏನಾಗಿದೆ ಎಂದರೆ, ಕಳೆದ ಸಾರಿಯ ಅಧಿವೇಶನ ಆದಮೇಲೆ ಹಸಿವನ್ನು ತಾಳಲಾರದೆ

ಕೆಲವು ಕಾರ್ಮಿಕರು ಸತ್ತಿದ್ದಾರೆ. ಅಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ಸಿಲಿಕೋಸಿಸ್ ಎಂಬ ಕಾಯಿಲೆ ಬರುತ್ತದೆ. ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳತಕ್ಕಂತಹ ವ್ಯವಸ್ಥೆ ಇದ್ದಂತಹವರು ಆರೋಗ್ಯವಾಗಿರುತ್ತಾರೆ. ಆದರೆ ಇವರಿಗೆ ಕಳೆದ ಎರಡು ವರ್ಷಗಳಿಂದ ಆ ರೀತಿಯ ಆಹಾರ ಸಿಕ್ಕದೆ ಕೆಲವು ಜನ ಸತ್ತಿದ್ದಾರೆ. (೧) ನಾಣಡಕ ಎಂದು ಒಬ್ಬರು (೨) ಮತ್ತೊಬ್ಬರು. ಸೂರಪ್ಪ ಎಂದು, (೩) ಇನ್ನೊಬ್ಬರು ಚಂದ್ರಪ್ಪ ಎಂದು. (೪) ಕೊನೆಯದಾಗಿ ನಂಜುಂಡಪ್ಪ ಈ ರೀತಿ ನಾಲ್ಕು ಜನ ಕಾರ್ಮಿಕರು ಸತ್ತಿದ್ದಾರೆ. ಇನ್ನೂ ಮೂರು ಜನ ಈ ಸಿಲಿಕೋಸಿಸ್ ಕಾಯಿಲೆಗೆ ತುತ್ತಾಗಿ ಚಿಂತಾಜನಕ ಪರಿಸ್ಥಿಯಲ್ಲಿದ್ದಾರೆ. ಇನ್ನೂ ೨೦ ಜನ ಬೆಡ್‌ನಲ್ಲಿ ಇದ್ದಾರೆ. ಅವರಿಗೆ ಊಟವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಅವರ ಪರಿಸ್ಥಿತಿ ಏನು ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ೩೬ ಜನರಿಗೆ ಇದು ತಗುಲಿದೆ. ಇದರ ಜೊತೆಯಲ್ಲಿ ಮಾಲೀಕರೇ ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಕಾರ್ಮಿಕರ ಮಕ್ಕಳೆಲ್ಲಾ ಅಲ್ಲಿ ಶಾಲೆಗೆ ಹೊಗುತ್ತಿದ್ದಾರೆ. ಆ ಶಾಲೆಯಲ್ಲಿ ಫೀಜನ್ನು ಕಟ್ಟಿಲ್ಲ ಎಂದು ಆ ಮಕ್ಕಳೆನ್ನು ಆಲ್ಲಿಂದ ಓಡಿಸಿಬಿಟ್ಟಿದ್ದಾರೆ. ಮತ್ತೆ ಆ ಕಾರ್ಮಿಕರು ಇರುವಂತಹ ಬಾಡಿಗೆ ಮನೆಯ ಬಾಡಿಗೆಯನ್ನು ಕೊಟ್ಟಿಲ್ಲವೆಂದು ಮನೆಯ ಮಾಲೀಕರೂ ಅವರನ್ನು ಹೊರಹಾಕಿದ್ದಾರೆ. ಈ ತರಹ ಬಹಳ ಗಂಭೀರವಾದ ಚಿಂತಾಜನಕ ಪರಿಸ್ಥಿತಿ ಅವರಿಗೆ ಬಂದಿದೆ. ಇದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಸರ್ಕಾರದವರು ಎನ್ನುವುದನ್ನು ಸ್ಪಷ್ಟವಾಗಿ ನನಗೆ ಹೇಳಲಿಲ್ಲ. ಎಂತೆಂಥವರಿಗೆ ಪರಿಹಾರವನ್ನು ಕೊಡುತ್ತಿದ್ದಾರೆ ಸರ್ಕಾರದವರು. ಆದೇ ರೀತಿ ಈ ಒಂದು ಘಟನೆಯಿಂದ ಯಾವ ಕಾರ್ಮಿಕರು ಸತ್ತಿದ್ದಾರೆ ಅವರ ಮನೆಯವರಿಗೆ ಬೇಕಾದ ಪರಿಹಾರವನ್ನು ಒದಗಿಸತಕ್ಕಂತಹ ಕೆಲಸ ಸರ್ಕಾರದ್ದು. ಕಾನೂನು ಪ್ರಕಾರ ಮಾಲೀಕ ಪರಿಹಾರ ಕೊಡುವುದಕ್ಕೆ ತಯಾರಾಗಿಲ್ಲ. ಅವರು ಕೋರ್ಟಿಗೆ ಹೋಗುತ್ತಾರೆ.

ಸತ್ತಿರುವವರ ಕುಟುಂಬಕ್ಕೆ ಪರಿಹಾರ ಕೊಡುವಂಥ ಜವಾಬ್ದಾರಿ ಸರ್ಕಾರಕ್ಕಿದೆ. ಅದನ್ನು ಸರ್ಕಾರ ಮಾಡಬೇಕು. ಎರಡನೆಯದು ಸರಿಯಾಗಿ ಮೆಡಿಕಲ್ ಟ್ರೀಟ್‌ಮೆಂಟ್, ಊಟಗಳಿಲ್ಲದೆ ವ್ಯಾಧಿಯಿಂದ ನರಳುತ್ತಿರುವವರ ಸ್ಥಿತಿ ಸುಧಾರಿಸಿ ಅವರು ಬದುಕುವ ವ್ಯವಸ್ಥೆ ಮಾಡಬೇಕು. ಮೂರನೆಯದು ಈಗ ಅವರನ್ನು ಕೇಳಬೇಕಾದ್ದು ಇಷ್ಟೇ ಈ ಎರಡು ಮೂರು ಅಂಶಗಳ ಬಗ್ಗೆ ನೆನ್ನೆ ಆಶ್ವಾಸನೆಯನ್ನೇನೋ ತಾವು ಕೊಟ್ಟಿರಿ. ಒಂದೇನೆಂದರೆ ಆದಷ್ಟು ಬೇಗ ಎಂದರೆ ಈ ಸೇಷನ್ ಮುಗಿದ ತಕ್ಷಣವೇ ತಾವು ಇದರ ಬಗ್ಗೆ ಕಾನೂನನ್ನು ತೆಗೆದುಕೊಂಡು ಬರುವ ವ್ಯವಸ್ಥೆ ಮಾಡಬೇಕು. ಅದನ್ನು ನೀವು ಸುಗ್ರೀವಾಜ್ಞೆ ತರುತ್ತೀರೋ ಅಥವಾ ಬೇರೆ ಯಾವುದರ ಮೂಲಕವೋ ಎನ್ನುವುದು ತಮಗೆ ಬಿಟ್ಟದ್ದು. ಈಗಾಗಲೇ ಕೇಂದ್ರದಲ್ಲಿ ಒಂದು ಕಾನೂನು ಇದೆ. ಅದು ಯಾವುದೆಂದರೆ. Sick Industries Amendment Act, ಸಿಕ್ ಇಂಡಸ್ಟ್ರೀಸ್ ಬಗ್ಗೆ Karnataka Relief Undertakings Act. ಪ್ರಕಾರ ಕಾರ್ಖಾನೆಯನ್ನು ಸರ್ಕಾರವೇ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಸರ್ಕಾರ ತಮ್ಮಲ್ಲಿ ಹಣ ಇಲ್ಲ, ಅದಿಲ್ಲ, ಇದಿಲ್ಲ ಎಂದು ಅಡ್ಡಿ ಹೇಳುತ್ತಿದ್ದಾರೆ ಜೆ. ಪೆಟ್. ಪಟೇಲರು ಮುಖ್ಯಮಂತ್ರಿಗಳೂ ಹಾಗೆ ಹೇಳುತ್ತಾ ಬರುತ್ತಿದ್ದಾರೆ. ಇದನ್ನೆಲ್ಲ ನಾವು ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ. ಆದರೂ ಕೂಡ ಸಿಕ್ಕಾಗಿರುವ ಕೈಗಾರಿಕೆಯನ್ನು ಕೇಂದ್ರದ ಆಕ್ಟ್ ಪ್ರಕಾರ ರಾಜ್ಯ ಸರ್ಕಾರವೇ ವಹಿಸಿಕೊಳ್ಳಬಹುದು ಅಥವಾ ಬೇರೆ ಕಾರ್ಖಾನೆಗಳ ಮ್ಯಾನೇಜ್‌ಮೆಂಟನವರು ವಹಿಸಿಕೊಳ್ಳಲು ಮುಂದೆ ಬಂದರೆ ಅಂಥವರಿಗೂ ಕೊಡಬಹುದು ಅಥವಾ ಕಾರ್ಮಿಕರೇ ಸೊಸೈಟಿ ಮಾಡಿಕೊಂಡು ಫ್ಯಾಕ್ಟರಿ ನಡೆಸಲು ಸಿದ್ಧವಾಗಿದ್ದರೆ ಅವರಿಗೇ ಬಿಟ್ಟುಕೊಡಬಹುದು ಅದಕ್ಕೆ ತಕ್ಕ ಕಾನೂನನ್ನು ನೀವು ತನ್ನಿರಿ. ಈಗ ಅದನ್ನು ಎಷ್ಟು ದಿವಸದಲ್ಲಿ ತರುತ್ತೀರಿ ಎಂದು ಹೇಳಿ ? ಅದು ಬಂದರೆ ಸ್ವಲ್ಪ ಮಟ್ಟಿಗೆ ಧೈರ್ಯ ಬರುತ್ತದೆ, ಕಾನ್‌ಫಿಡೆನ್ಸ್ ಬರುತ್ತದೆ. ಇದರಿಂದ ಕಷ್ಟದ ಸಧ್ಯದ ಸ್ಥಿತಿ ಬದಲಾವಣೆ ಆದರೂ ಆಗಬಹುದು.

ಇನ್ನೊಂದು ವಿಷಯವೇನೆಂದರೆ Industrial Disputes Act 33(c) ಪ್ರಕಾರ ಅಪ್ಲಿಕೇಷನ್ ಹಾಕಿಕೊಂಡಿದ್ದಾರೆ. ಕೇಸ್ ಹಾಕಿದ ಮೇಲೆ ಅದು ನಡೆಯುತ್ತಲೇ ಹೋಗುತ್ತದೆ. ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ಹೋಗಬಹುದಾದ ಇದು ಪರಿಹಾರ ಆಗುವುದೂ ಇಲ್ಲ ಸಧ್ಯಕ್ಕೆ, ಇದರಿಂದ ಪರಿಹಾರವೂ ನೌಕರರಿಗೆ ಸಿಕ್ಕುವುದಿಲ್ಲ. ಆದ್ದರಿಂದ ತಾವು ಆದಷ್ಟು ಬೇಗ ಸೂಕ್ತ ಕಾನೂನು ತರುವ ತೀರ್ಮಾನ ಮಾಡಿ. ಮೂರನೆಯದು ನಾನು ಬೇರೆ ಕಂಪನಿಗಳ ಬಗ್ಗೆ ಮಾತನಾಡುವಾಗಲೇ ಈ ಸಲಹೆ ಕೊಟ್ಟಿದ್ದೇನೆ. ಆಗ ನೀವು ಕಾನೂನು ತರುತ್ತೇವೆಂದಿದ್ದೀರಿ. ಆದ್ದರಿಂದ ಆದಷ್ಟು ಬೆ ಗ ಇದನ್ನು ಮಾಡಿ.

ನಾಲ್ಕನೆಯದಾಗಿ ಈ ವಿಷಯಗಳಲ್ಲಿ ಈ ಸರ್ಕಾರಕ್ಕೆ ಏನು ಮಾಡುವುದಕ್ಕೂ ಪವರ್ಸ್ ಇಲ್ಲ ಎಂದು ದೌರ್ಬಲ್ಯ ತೋರಿಸುತ್ತೀರಿ. ಈ ಫ್ಯಾಕ್ಟರಿ ಮಾಲೀಕ ಸರ್ಕಾರ ಕೊಡುವ ಯಾವ ಆದೇಶ

ವನ್ನೂ ಕೇಳುತ್ತಿಲ್ಲ. ಏನೋ ಒಂದು ಸಲ ಮಾತ್ರ ಅವನು ಫ್ಯಾಕ್ಟರಿಯ ಮೆಷಿನರೀಸನ್ನು ಬೇರೆ ಕಡೆಗೆ ಸಾಗಿಸಲು ಯತ್ನಿಸಿದಾಗ ನೀವು ತಡೆಹಾಕಿದಿರಿ. ಆದರೆ ಬೇರೆ ಮಾತುಗಳನ್ನು ಕೇಳದ ಇಂಥ ಮಾಲೀಕನಿಗೆ ಕಿವಿಹಿಂಡಿ ಬುದ್ಧಿ ಕಲಿಸುವ ಶಕ್ತಿ ಸರ್ಕಾರಕ್ಕೆ ಇದರಲ್ಲೂ ಜನತಾಪಕ್ಷದ ಸರಕಾರಕ್ಕೂ ಇಲ್ಲದೇ ಹೋದರೆ ಇನ್ನಾವ ಸರ್ಕಾರಕ್ಕೆ ಆ ಶಕ್ತಿ ಬರುತ್ತದೆ? ಸ್ಕ್ರೂ ಟೈಟ್ ಮಾಡುವ ವಿಷಯ ತಮಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲದಿದ್ದರೆ ನಮ್ಮ ಬಳಿಬನ್ನಿ ಖಾಸಗಿಯಾಗಿ ನಾವು ಹೇಳಿಕೊಡುತ್ತೇವೆ. ಈಗಿನ ತರಹ ಪಾಪ ನೌಕರರು ಎರಡು ವರ್ಷದಿಂದ ಹಸಿವಿನಿಂದ ಸಾಯುವ ಹಾಗೆ ಮಾಡಿದ್ದು ಅಕ್ಷಮ್ಯ ಅಪರಾಧ. ಈ ೩-೪ ವಿಚಾರಗಳ ಬಗ್ಗೆ ತಾವು ಸ್ಪಷ್ಟವಾದ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ ಈಗಾಗಲೇ ನಾನು ಹೇಳಿದಂತೆ ಸಂಬಂಧಿಸಿದ ಕಾನೂನನ್ನು ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಬೊನಸ್ ಕೊಡುವ ವಿಚಾರದಲ್ಲಿ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಆಜ್ಞೆ ಮಾಡಿದ್ದೇನೆ. ಪ್ರಾಪರ್ಟಿ ಅಟ್ಯಾಚ್ ಮಾಡುವುದಕ್ಕೂ ಹೇಳಿದ್ದೇನೆ. ಅದನ್ನು ಮಾಡಿ ಆದಷ್ಟು ಬೇಗ ಲೇಆಫ್ ಕಾಂಪನ್‌ಸೇಷನ್ ಕೊಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೂ ಸ್ಕ್ರೂ ಟೈಟ್ ಮಾಡುವ ಬಗ್ಗೆ ಖಾಸಗಿಯಾಗಿ ಹೇಳುತ್ತೇನೆ ಎಂದಿದ್ದಾರೆ. ಬೇಕಾದರೆ ನಾನು ಕೃಷ್ಣನ್ ಅವರನ್ನು ಖಾಸಗಿಯಾಗಿ ಭೇಟಿ ಮಾಡುತ್ತೇನೆ. ಆದರೆ ಅದು ಸಂವಿಧಾನಬದ್ಧವಾಗಿ ಮತ್ತು ಜನತಂತ್ರಾತ್ಮಕ ರೀತಿನೀತಿಯಾಗಿದ್ದರೆ ಸಾಕು. ಆದ್ದರಿಂದ ನಿಮ್ಮ ವಿಧಾನ ಯಾವರೀತಿಯದೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಗೊತ್ತಿಲ್ಲ ಎಂದು ಹೇಳಿಬಿಡಿ.

ಅಧ್ಯಕ್ಷರು.—ಮಾನ್ಯ ಕೃಷ್ಣನ್ನರೇ ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೆ ಗೊತ್ತಿರುವ ವಿಷಯಗಳನ್ನೆಲ್ಲಾ ಈಗಾಗಲೇ ಮಾಡಲಾಗಿದೆ. ನಿಮ್ಮ ಸಲಹೆ ತೆಗೆದುಕೊಳ್ಳುವುದರಲ್ಲಿ ತಪ್ಪೇನಿದೆ. ಸಭಾಧ್ಯಕ್ಷರೇ ಯಾವ ಕ್ರಮದಿಂದ ನೌಕರರಿಗೆ ಅನುಕೂಲ ಮಾಡಿಕೊಡಬಹುದೋ ಆ ಬಗ್ಗೆ ಸರ್ಕಾರ ಎಲ್ಲಾ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ ಮೊನ್ನೆ ಸಾವಿರ ಜನರು ಡೆಮಾನ್‌ಸ್ಟ್ರೇಷನ್ ಮಾಡಿದ್ದರು. ಎರಡು ವರ್ಷಗಳಿಂದ ಮುಚ್ಚಿರುವ ಫ್ಯಾಕ್ಟರಿ ತೆಗೆಸಲು ಏನೆಲ್ಲಾ ಕಾರಣಗಳನ್ನು ಎಂದರೆ ಎಲೆಕ್ಟ್ರಿಸಿಟಿ ಪ್ರಾಬ್ಲಮ್, ಲೇಬರ್ಸ್ ಡಿಸ್‌ಪ್ಯೂಟ್ ಎಂದು ಹೇಳಿ ಲೇಆಫ್ ಕಂಟಿನ್ಯೂ ಆಗಿಯೇ ಇದೆ. ಇನ್ನೊಂದೇನೆಂದರೆಲಾಸ್ಟ್ ಟೈಮ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುವಾಗ ಶ್ರೀ ಜೆ.ಹೆಚ್. ಪಟೇಲರು ಯಾರೋ ಹುಟ್ಟಿಸಿದ ಕೂಸನ್ನೆಲ್ಲ ನಾನು ಏಕೆ ಸಾಕಲಿ ಎಂದು ಹೇಳಿಬಿಟ್ಟರು ಈಗ ಸುಮಾರು ಮೂರುನಾಲ್ಕು ಸಾವಿರ ಜನ ನೌಕರರಿಗೆ ಸರ್ಕಾರವೇ ಏನಾದರೂ ಒಂದು ಪರಿಹಾರ like Flood Relief Fund ಎಂದು ಕೊಡಬೇಕು. ವರ್ಕರ್ಸ್‌ಗೆ ಇದ್ದ ಫೆಸಿಲಿಟಿಸೆಲ್ಲಾ ರದ್ದಾಗಿವೆ. ಇಂಥ ಫ್ಯಾಮಿಲಿಗಳು ಸರ್ವೈವ್ ಆಗಬೇಕಾದರೆ It is the fundamental duty of Government to safeguard the workers because they are part of our State ಎಂದು ಹೇಳಬೇಕು. ಕಾನೂನು ಪ್ರಕಾರ Industrial Dispute ಆಕ್ಟ್‌ನಂತೆ ನೀವು ಏನಾದರೂ ಮಾಡಬೇಕು. ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದೆ ಎಂಬುದು ನಮಗೆ ಗೊತ್ತು. ಆದರೂ ಏನಾದರೂ ಮಾಡಲು ತಾವು ಮುಂದೆ ಬರುತ್ತೀರೆಂದು ಕೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ ಈ ಕಾರ್ಮಿಕರ ಕಷ್ಟಗಳ ಬಗ್ಗೆ ಸರ್ಕಾರಕ್ಕೆ ಸಂಪೂರ್ಣ ಸಹಾನುಭೂತಿ ಇದೆ. ಆದರೆ ಕಾನೂನು ಚೌಕಟ್ಟಿನಲ್ಲಿ ಪರಿಹಾರ ಕೊಡಲಿಕ್ಕೆ ಅವಕಾಶವಿಲ್ಲ. ತಾವು ಹೇಳಿದ್ದನ್ನು ಒಪ್ಪುತ್ತೇನೆ. ಕಾನೂನಿಗೆ ತಿದ್ದುಪಡಿ ಆಗಬೇಕು ಎಂದು ನನಗೂ ಆಸೆ ಇದೆ. ಆದರೆ ಇವೊತ್ತಿನ ಸಂವಿಧಾನಾತ್ಮಕ ಕಾನೂನಿಗೆ ಒಳಪಟ್ಟು ಆಲೋಚನೆ ಮಾಡಿದಾಗ ಅವರಿಗೆ ಪರಿಹಾರ ಕೊಡಲಿಕ್ಕೆ ಅವಕಾಶವಿಲ್ಲ. ಇನ್ನು ಹಾಸ್ಪಿಟಲ್, ಔಷಧಿ ವಿಚಾರ. ನೀವು ಹೇಳಿದಂಥ ಕಾಯಿಲೆಯಂತರು ಯಾರೇ ಇರಲಿ ಅವರಿಗೆ ಔಷಧ ಉಪಚಾರಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ಬಹಳ ಹಳೆಯ ವಿಚಾರ. ಕಳೆದ ಸಲ ಮೊದಲ ಬಾರಿಗೆ ಸದನದ ಮುಂದೆ ಇದು ಬಂದಾಗ ಶ್ರೀ ಪಟೇಲರು ಕಾನೂನು ಕಷ್ಟ ಇದೆ

ಎಂದು ಹೇಳಿ ಯಾವುದೇ ಕೆಲಸವನ್ನೂ ಮಾಡಲಿಲ್ಲ. ಈಗ ನಾವು ಕಾನೂನಿನ ಎಲ್ಲಾ ವಿಚಾರವನ್ನು ತಮ್ಮ ಮುಂದಿಟ್ಟಿದ್ದೇವೆ. ಕಾನೂನು ಪ್ರಕಾರ ಈ ದಾರಿಯಲ್ಲಿ ಹೋಗಿ ಎಂದು ಹೇಳುತ್ತಿದ್ದೇನೆ. ನಾವು ಹೇಳುವುದು ಇಷ್ಟೇ, ಸ್ಕೂಲ್ ಟೈಟ್ ಮಾಡುವುದಕ್ಕೆ ಪೊಲಿಟಿಕಲ್ ವಿಲ್ ಪವರ್ ಇದ್ದರೆ ಸಾಕು ತೀರ್ಮಾನ ತೆಗೆದುಕೊಳ್ಳಬಹುದು. ಅದನ್ನು ನೀವು ತೋರಬೇಕು. ಇನ್ನು ಆಲ್ಲಿ ಫ್ಯಾಕ್ಟರಿ ಕಾರ್ಮಿಕ ನಡೆಸುವ ಉಜ್ವಲ ವಿದ್ಯಾಲಯ ಎಂದು ಶಾಲೆ ಇದೆ. ಅಲ್ಲಿ ಈ ಕಾರ್ಮಿಕ ಮಕ್ಕಳು ಫೀಸು ಕೊಡಲಿಲ್ಲ ಎಂದು ಅವರನ್ನೆಲ್ಲಾ ಮನೆಗೆ ಕಳಿಸಿಬಿಟ್ಟಿದ್ದಾರೆ. ಫೀಸನ್ನು ಯಾರು ಹೇಗೆ ಕೊಡ ಬೇಕು? ಇಷ್ಟೆಲ್ಲಾ ಆದರೂ ನೀವು ಕಾನೂನು ತರುತ್ತೇವೆ, ಕಾನೂನು ತರುತ್ತೇವೆ ಎಂದು ಹೇಳುತ್ತಲೇ ಇದ್ದೀರಿ. ನಮ್ಮ ಹಳ್ಳಿಕಡೆ ಒಂದು ಗಾಧೆ ಹೇಳುತ್ತಾರೆ, ಸಾಹುಕಾರನ ಕಣಜ ತೆಗೆಯೋದ್ರಲ್ಲಿ ಬಡವನ ಪ್ರಾಣ ಹೋಗಿತ್ತು ಎಂದು. ನಿಮಗೆ ಪೊಲಿಟಿಕಲ್ ವಿಲ್‌ಪವರ್ ಇಲ್ಲ ಎಂದು ಹೇಳಿ. ಆ ಫ್ಯಾಕ್ಟರಿ ಮಾಲೀಕ ಈ ಫ್ಯಾಕ್ಟರಿಯಿಂದ ಸಂಪಾದಿಸಿದ ಲಾಭವನ್ನೆಲ್ಲಾ ಬೇರೆ ರಾಜ್ಯಗಳಿಗೆ ಸಾಗಿಸಿ ಅಲ್ಲಿ ಫ್ಯಾಕ್ಟರಿ ಓಪನ್ ಮಾಡುತ್ತಿದ್ದಾನೆ. ಫ್ಯಾಕ್ಟರಿ ಡಿಸ್‌ಮ್ಯಾಟಿಡ್ ಎಂದು ಯಾವುದೋ ಒಂದು ಕಾರಣ ಹೇಳಿ ಫ್ಯಾಕ್ಟರಿ ಬಾಗಿಲು ತೆಗೆಯಲು ಮುಂದಾಗುತ್ತಲೇ ಇಲ್ಲ. ಬೇರೆ ರೀತಿಯ ಫ್ಯಾಕ್ಟರಿ ಬೇರೆ ರಾಜ್ಯಗಳಲ್ಲಿ ತೆಗೆಯಲು ಪ್ರಯತ್ನ ಮಾಡುತ್ತಿದ್ದಾನೆ. ಇದನ್ನು ತಡೆಗಟ್ಟಲು ಸರ್ಕಾರ ಶೀಘ್ರವಾಗಿ ಯೋಚನೆ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೇನೂ ವಿಲ್‌ಪವರ್ ಬೇಕಾದಷ್ಟು ಇದೆ. ಇಲ್ಲ ಎನ್ನಲಾಗುವುದಿಲ್ಲ. ಸರ್ಕಾರ ಖಂಡಿತವಾಗಿ ನೌಕರರು ಕಷ್ಟ ನೀಗಿಸಲು ಎಲ್ಲಾ ಪ್ರಯತ್ನ ಮಾಡುತ್ತದೆ ಆದು ಕಾನೂನು ಪ್ರಕಾರ ಇರಬೇಕು ಅಷ್ಟೇ. ಖಾಸಗಿಯಾಗಿರತಕ್ಕ ಕಾರ್ಖಾನೆಗಳು ರಾಷ್ಟ್ರದಲ್ಲಿ ಈ ರೀತಿ ಮುಚ್ಚುತ್ತಿವೆ. ನಮ್ಮ ರಾಜ್ಯದಲ್ಲಿ ಒಂದೇ ಇಲ್ಲ. ಇದು ಖಾಸಗಿ ಸಂಸ್ಥೆ. ತಾವು ಅರ್ಥ ಮಾಡಿಕೊಳ್ಳಬೇಕು. ಯಾವರೀತಿಯಿಂದ ಒತ್ತಡ ತರಬಹುದು ಅವರ ಮೇಲೆ ಏಂಬುದನ್ನು ಹೇಳಿ, ತರೋಣ. ಅವರು ತೆರೆಯದೇ ಹೋದಾಗ ಕಾನೂನು ಬದಲಾವಣೆ ಮಾಡುವ ಆಲೋಚನೆ ಮಾಡುತ್ತಿದ್ದೇವೆ. ಈ ಒಂದು ಕಾರ್ಖಾನೆ ದೃಷ್ಟಿಯಿಂದ ನಾನು ಹೇಳುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—'ಎಸ್ಮಾ' ನನ್ನ ಮೇಲೆ ಉಪಯೋಗಿಸುವ ಬದಲು ಆ ಕಾರ್ಖಾನೆ ಮಾಲೀಕನ ಮೇಲೆ ಉಪಯೋಗಿಸಿ ಆ ದೇಶದ್ರೋಹಿಗಳನ್ನು ಸ್ವಲ್ಪ ದಿನ ಜೈಲಿನಲ್ಲಿಡಿ, ಸರಿಹೋಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಖಾಸಗಿ ಕಾರ್ಖಾನೆ ಬಂದ್ ಆದಾಗ ದೇಶದ್ರೋಹ ಆಗುತ್ತದೆಯೇ? ಆ ರೀತಿ ಆಗುವುದಿಲ್ಲ. ಅದು ಕಮ್ಯುನಿಸ್ಟ್ ರಾಜ್ಯದಲ್ಲಿ ಸಾಧ್ಯವಿದೆ. ಇಲ್ಲ ಎಂದು ಹೇಳುವುದಿಲ್ಲ. ಅಂಥ ಸಂವಿಧಾನ ನಮ್ಮಲ್ಲಿ ಬರಲಿ.

ಶ್ರೀ ಎಂ.ಎಸ್. ಕೃಷ್ಣನ್.—ನಿನ್ನು ಪಕ್ಷ ಒಬ್ಬರಿಗೆ ಆ ಕೆಲಸ ಮಾಡಲಿ. ಒಬ್ಬ ಮಾಲೀಕನನ್ನು ಆ ರೀತಿ ಮಾಡಿ ನೋಡೋಣ. ಅವನನ್ನು ಕರೆದುಕೊಂಡು ಹೋಗಿ ೧೫ ದಿನ ಜೈಲಿನಲ್ಲಿ ಹಾಕಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ವೆಸ್ಟ್ ಬೆಂಗಾಲ್‌ನಲ್ಲೂ ಹಾಗೆ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಕಾನೂನು ಬಿಟ್ಟು ಯಾರೂ ಮಾಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಸುಮ್ಮನೆ ಆಗುವುದಿಲ್ಲ ಎಂದು ಆಕಾಶ ತೋರಿಸಬೇಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೇಳಬೇಕಾಗುತ್ತದೆ. ವೆಸ್ಟ್ ಬೆಂಗಾಲ್‌ನಲ್ಲೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಆ ರೀತಿ ಕಾರ್ಖಾನೆ ಮಾಲೀಕರನ್ನು ಜೈಲಿನಲ್ಲಿ ಹಾಕುವುದಕ್ಕಾಗುವುದಿಲ್ಲ ಬಿಡಿ. ಅದೆಲ್ಲಾ ಬೇಡ, ಕಾನೂನು ತಿದ್ದುಪಡಿ ಮಾಡತಕ್ಕ ವಿಚಾರ ಮಾಡುತ್ತಿದ್ದೇವೆ. ಈ ರೀತಿ ಮುಂದೆ ಆಗದಂತೆ ತಡೆಗಟ್ಟುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಏನು ಮಾಡುತ್ತೀರಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಏನೂ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಅವರ ಸಹವಾಸ ಮಾಡಬೇಡಿ ಚೆನ್ನಾಗಿಲ್ಲ ಎಂದು ಹೇಳಿದರೆ ಕೇಳಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ನೀವು ಮಾಡಿದ್ದೂ ಅಷ್ಟೇ ಕಣ್ರಿ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಇನ್ನೊಂದು ವಿಚಾರ.....

ಶ್ರೀ ಎಂ.ಎಸ್. ಕೃಷ್ಣನ್,—ನೀವೂ ಆಷ್ಟೆ, ಅವರೂ ಆಷ್ಟೆ, ಇಬ್ಬರೂ ಒಂದೆ. ಒಂದೇ ತಕ್ಕಡಿಯಲ್ಲಿ ನಿಲ್ಲಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ವಿದ್ಯಾಭ್ಯಾಸದ ವಿಚಾರ ಹೇಳುತ್ತಿದ್ದೇನೆ.

ಶ್ರೀ ಕೆ.ಬಿ. ಶಾಣಪ್ಪ.—ಅದರ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್: ಬೊಮ್ಮಾಯಿ.—ಕಾರ್ಖಾನೆ ಕಾರ್ಮಿಕರ ಮಕ್ಕಳು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದರೆ ಈ ವರ್ಷ ಫೀಸ್ ವಸೂಲು ಮಾಡದಂತೆ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ನಿಮಗೂ ಹಕ್ಕಿಲ್ಲ, ಖಾರ್ಗೆಯವರಿಗೂ ಹಕ್ಕಿಲ್ಲ, ಕೇಳುವುದಕ್ಕೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಹೆಳಿದ್ದು ಗೊತ್ತಾಗಿಲ್ಲ. ಇದು ಮಾಲೀಕರು ನಡೆಸುತ್ತಿರುವ ಶಾಲೆ. ಹುಡುಗರನ್ನು ಮನೆಗೆ ಆಟ್ಟಿದ್ದಾನೆ. ತಕ್ಷಣ ವ್ಯವಸ್ಥೆ ಮಾಡಿ ವಿದ್ಯಾಭ್ಯಾಸ ಕೊಡುವುದಕ್ಕೆ ಅವಕಾಶ ಮಾಡುತ್ತೀರಾ ಅಥವಾ ತಂದೆತಾಯಿಗಳ ಜೊತೆಯಲ್ಲಿ ಅವರನ್ನೂ ಬೀದಿಪಾಲು ಮಾಡುತ್ತೀರಾ?

ಶ್ರೀ ಕೆ.ಬಿ. ಶಾಣಪ್ಪ.—ಶಾಲೆ ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಿ ಶಾಲಾಕಾಲೇಜುಗಳಲ್ಲಿ ಓದುತ್ತಿದ್ದರೆ ಫೀಸ್ ವಸೂಲು ಮಾಡುವುದಿಲ್ಲ, ನಿಲ್ಲಿಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಸರ್ಕಾರಿ ಶಾಲೆಯಲ್ಲಿ ಓದುತ್ತಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಬಚ್ಚೇಗೌಡರು ಕೇಳಲಿ. ಇದು ಅವರ ಕ್ಷೇತ್ರಕ್ಕೆ ಸಂಬಂಧಿಸಿದ್ದು.

ಶ್ರೀ ಬಿ.ಎನ್. ಬಚ್ಚೇಗೌಡ.—ಈ ಅಲೆಂಬಿಕ್ ಗ್ಲಾಸ್ ಕಾರ್ಖಾನೆ ನನ್ನ ಕ್ಷೇತ್ರದಲ್ಲಿ ಬರುತ್ತದೆ. ಆ ಬಗ್ಗೆ ಈ ಸದನದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಾರ್ಮಿಕ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಸೇರಿ ಮಾತನಾಡಿ ಕೆಲವು ತೀರ್ಮಾನಗಳನ್ನು ತೆಗೆದುಕೊಂಡು ಆ ಬಗ್ಗೆ ಸಚಿವರು ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ. ಸುಮಾರು ೧ ಸಾವಿರ ಜನ ಕಾರ್ಮಿಕರು ಕಳೆದ ಎರಡು ವರ್ಷಗಳಿಂದ ಬೀದಿಪಾಲಾಗಿದ್ದಾರೆ. ಲೇ ಆಫ್ ಆಗಿ ಅವರಿಗೆ ಸಂಬಳ ಕೊಟ್ಟಿಲ್ಲ. ಆದಷ್ಟು ಬೇಗ ಈ ಕಾರ್ಖಾನೆಯನ್ನು ಸ್ವಾಧೀನಪಡಿಸಿಕೊಂಡು ಕರ್ನಾಟಕ ರಿಲೀಫ್ ಆಂಡರ್‌ಟೇಕಿಂಗ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡುವ ಕ್ರಮ ತೆಗೆದುಕೊಂಡು ಆದಷ್ಟು ಬೇಗ ಕಾರ್ಖಾನೆಯನ್ನು ತೆರೆಯುವ ವ್ಯವಸ್ಥೆ ಮಾಡಬೇಕು. ಮಾನ್ಯ ಮಂತ್ರಿಗಳ ಹೇಳಿಕೆ ಈ ದಿಸೆಯಲ್ಲಿ ಸ್ವಾಗತಾರ್ಹವಾದುದು. ಆದ್ದರಿಂದ ಈ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಆದಷ್ಟು ಬೇಗ ಪ್ರಾಸಿಕ್ಯೂಟ್ ಮಾಡುತ್ತೇವೆ.

ಅಧ್ಯಕ್ಷರು.—ಮುಂದಿನ ಗಮನ ಸೆಳೆಯುವ ಸೂಚನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಇಡೀ ದಿವಸ ನಿಮ್ಮ ಸಲುವಾಗಿ ಇರುವುದಕ್ಕಾಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ತಮಗೆ ಪೂರ್ತಿಯಾಗಿ ಮರ್ಯಾದೆ ಕೊಡುತ್ತೇನೆ. ತಾವು ಯಾವತ್ತೂ ಬಹಳ ಔದಾರ್ಯ ತೋರಿಸಿದ್ದೀರಿ. ಒಂದು ವಿಷಯದ ಬಗ್ಗೆ ಸ್ಪಷ್ಟತೆ ಇರಲಿ ಎಂದು ಕೇಳುತ್ತಿದ್ದೇನೆ. ಇದು ಮಾಲೀಕರು ನಡೆಸುವ ಶಾಲೆ. ಖಾಸಗಿ ಶಾಲೆ, ಆದ್ದರಿಂದ ಸ್ಪೆಷಲ್ಲಾಗಿ ವ್ಯವಸ್ಥೆ ಮಾಡುವುದಕ್ಕೆ ಮಂತ್ರಿಗಳು ಯೋಚನೆ ಮಾಡಿದರೆ ಆಗಬಹುದು. ಇಲ್ಲದಿದ್ದರೆ ಸುಮಾರು ೫೦೦-೬೦೦ ಜನ ಮಕ್ಕಳಿಗೆ ಕಷ್ಟವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.